ಪಾಠ–8 ಫೆಬ್ರವರಿ 16–22

# ಸೈತಾನ, ಸೋತುಹೋದ ವೈರಿ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಪ್ರಕ 12, ಆದಿಕಾಂಡ 3:15, ಯೆಶಾಯ 14:12–15; ದಾನಿಯೇಲ 7:23–25, 2 ಥೆಸಲೋನಿಕ 2:8–12, ಪ್ರಕಟನೆಗಳು 13:13,14, ಪ್ರಕ 19:20.

**ಸ್ಮರಣವಾಕ್ಯ : "ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂತೆಗೆಯದೆ ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು ಜಯಿಸಿದರು" – ಪ್ರಕಟನೆ 12:11.**

ಪ್ರಕಟನೆಗಳ 12–14 ಅಧ್ಯಾಯಗಳು ನಮ್ಮನ್ನು ಅಂತ್ಯಕಾಲದ ಘಟನೆಗಳಿಗೆ ಸಿದ್ಧಪಡಿಸುತ್ತವೆ.

ಪುಸ್ತಕದ ಒಂದು ಭಾಗ ಪ್ರಕಟನೆಗಳು 15:1 ರಿಂದ 22:21 ಮತ್ತು ಪ್ರಕಟನೆಗಳು 1:1 ರಿಂದ 11:19 ಕ್ರೈಸ್ತಯುಗದ ಪರ್ಯಂತ, ದ್ವೇಷ ತುಂಬಿದ ಪ್ರಪಂಚದಲ್ಲಿ ಸಭೆಯ ಅಧ್ಯಾತ್ಮಿಕ ಹೋರಾಟ ಮತ್ತು ಉಳಿದ ಭಾಗವು ಕ್ರಿಸ್ತನ ಎರಡನೇ ಬರೋಣದ ಮತ್ತು ದೇವರ ರಾಜ್ಯದೆಡೆಗೆ ನಮ್ಮನ್ನು ಮುನ್ನಡೆಸುವ ಮುಖ್ಯ ಘಟನೆಗಳಿಗೆ ಗಮನ ಹರಿಸುತ್ತದೆ.

ಪ್ರಕಟನೆ 12ನೇ ಅಧ್ಯಾಯವು ಲೋಕದ ಅಂತಿಮ ಚರಿತ್ರೆಯ ಬಿಕ್ಕಟ್ಟಿನ ಹಿಂದಿರುವ ದೊಡ್ಡ ಚಿತ್ರವನ್ನು ಬಿಂಬಿಸುತ್ತದೆ. ಚರಿತ್ರೆಯಾದ್ಯಂತ ಕ್ರಿಸ್ತನ ಮತ್ತು ಸೈತಾನನ ನಡುವೆ ನಡೆಯುತ್ತಿರುವ ಮಹಾ ಹೋರಾಟದ ಬೆಳವಣಿಗೆಗಳನ್ನು ತೋರಿಸುತ್ತದೆ.

ಪ್ರಕಟನೆ ಪುಸ್ತಕದಲ್ಲಿ ಸೈತಾನನು ದೇವರ ಮತ್ತು ಆತನ ಮಕ್ಕಳ ಮಹಾ ವೈರಿಯಾಗಿದ್ದಾನೆ. ಈತನು ನಿಜವಾಗಿಯೂ ಇದ್ದಾನೆ ಮತ್ತು ಎಲ್ಲಾ ಕೆಟ್ಟವುಗಳ ಮತ್ತು ಬಂಡಾಯದ ಹಿಂದೆ ಈತನಿದ್ದಾನೆ. ಕ್ರಿಸ್ತನು ಎರಡನೇ ಸಲ ಬರುವ ಮುನ್ನ ಯುದ್ಧವನ್ನು ಗೆಲ್ಲುವ ಮತ್ತು ದೇವರ ವಿರೋಧವಾಗಿ ಯಶಸ್ಸನ್ನು ಹೊಂದುವ ಕಡೆಯ ಅವಕಾಶ ಹರ್ಮೆಗದಾನ್ ಯುದ್ಧದಲ್ಲಿ ಜಯಗಳಿಸುವುದಾಗಿದೆ. ಹಾಗಾಗಿ ತನ್ನ ಎಲ್ಲಾ ಪ್ರಯತ್ನ ಪರಿಶ್ರಮಗಳನ್ನು ಈ ಘಟನೆಯ ಮೇಲೆ ಕೇಂದ್ರೀಕರಿಸುವನಿದ್ದಾನೆ. ಜಯ ಹೊಂದಲಾರ ಎಂಬ ಭರವಸೆಯನ್ನು ದೇವಜನರಿಗೆ ನೀಡುವ ಉದ್ದೇಶ ಪ್ರಕಟನೆ 12ನೇ ಅಧ್ಯಾಯದಲ್ಲಿದೆ.

ಸೈತಾನನು ದೇವರ ಕಡೆಯ ಮತ್ತು ಉಳಿದ ಸಭೆಯ ಮೇಲೆ ಪೂರ್ಣ ಭಯಹೊಂದಲು ಯುದ್ಧವನ್ನು ನಡಿಸಲು ದೃಢನಿಶ್ಚಯ ಮಾಡಿದ್ದಾನೆಂತಲೂ ಎಚ್ಚರಿಸುತ್ತದೆ. ಹೀಗಿರುವಾಗ ಈ ಹೋರಾಟದಲ್ಲಿ ದೇವಜನರು ಜಯಹೊಂದುವ ಏಕಮಾತ್ರ ನಿರೀಕ್ಷೆ ಬಲಗಳು ಕ್ರಿಸ್ತನಲ್ಲಿ ಮಾತ್ರ ಸಿಗುತ್ತದೆ.

**ಭಾನುವಾರ** **ಫೆಬ್ರವರಿ 17**

## ಸ್ತ್ರೀ ಮತ್ತು ಘಟಸರ್ಪ

**ಓದಿರಿ : ಪ್ರಕಟನೆ 12:1–5. ಯೋಹಾನನು ಎರಡು ಗುರುತುಗಳನ್ನು ಈ ದರ್ಶನದಲ್ಲಿ ನೋಡುತ್ತಾನೆ. ಮೊದಲನೆಯದು ಮಗುವನ್ನು ಹೆರುತ್ತಿರುವ ಗರ್ಭವತಿ ಸ್ತ್ರೀ ಮತ್ತು ಎರಡನೆಯದು ಘಟಸರ್ಪ. ಈ ಗುರುತುಗಳು ಅಥವಾ ಸಂಕೇತಗಳು ಏನನ್ನು ಪ್ರತಿನಿಧಿಸುತ್ತವೆ ಮತ್ತು ಈ ವಚನಗಳು ಏನು ಬೋಧಿಸುತ್ತವೆ?**

ಸತ್ಯವೇದದಲ್ಲಿ ಸ್ತ್ರೀಯು ದೇವ ಜನರನ್ನು ಸಂಕೇತಿಸುತ್ತದೆ (2 ಕೊರಿಂಥ 11:2) ಒಂದು ಪತಿವ್ರತೆಯಾದ ಹೆಂಗಸು ನಂಬಿಗಸ್ತ ವಿಶ್ವಾಸಿಗಳಿಗೆ ಉದಾಹರಣೆಯಾಗಿದ್ದಾಳೆ. ಜಾರಸ್ತ್ರೀಯು ಭ್ರಷ್ಟರಾದ ಕ್ರೈಸ್ತರಿಗೆ ಉದಾಹರಣೆ ಆಗಿದ್ದಾಳೆ. 12ನೇ ಅಧ್ಯಾಯದ ಸ್ತ್ರೀಯು ಮೊದಲಿಗೆ ಇಸ್ರಾಯೇಲನ್ನು ಸಂಕೇತಿಸುತ್ತಾಳೆ. ಅವರಿಗೋಸ್ಕರವೇ ಮೆಸ್ಸೀಯನು ಬಂದನು (ಪ್ರಕ 12:1–5), 13 ರಿಂದ 17 ವಚನಗಳಲ್ಲಿ ಆಕೆ ಉಳಿದವರಿಗೆ ಜನ್ಮ ನೀಡಿದ ಸತ್ಯ ಸಭೆಗೆ

ಸಂಕೇತವಾಗಿದ್ದಾಳೆ. ಈ ಸ್ತ್ರೀಯು ತನ್ನ ಕಾಲ ಕೆಳಗೆ ಸೂರ್ಯನನ್ನು ಮತ್ತು ಚಂದ್ರನನ್ನು ಧರಿಸಿಕೊಂಡಿರುವುದನ್ನು ಇದು ಚಿತ್ರಿಸುತ್ತದೆ.

ಕ್ರಿಸ್ತನ ಗುಣಸ್ವಭಾವದ ಮಹಿಮೆಯನ್ನು ಆತನ ನೀತಿಯನ್ನು ಸೂರ್ಯನು ಪ್ರತಿನಿಧಿಸುತ್ತಾನೆ (ಮಲಾ 4:2). ಆತನು ಲೋಕಕ್ಕೆ ಬೇಕಾಗಿದ್ದಾನೆ (ಯೋಹಾನ 3:12). ಆತನ ಜನರು ದೇವರ ಪ್ರೀತಿಯ ಗುಣವನ್ನು ಪ್ರತಿಫಲಿಸಬೇಕು (ಮತ್ತಾಯ 5:14–16). ಕಡಿಮೆ ಬೆಳಕಿನ ಚಂದ್ರನು (ಆದಿ 1:16) ಸುವಾರ್ತಾ ಕಾಲದ ಕ್ರಿಸ್ತನ ಕೆಲಸಗಳ ಛಾಯೆಗಣದ ಹಳೆಯ ಒಡಂಬಡಿಕೆಯ ವಾಗ್ದಾನಗಳನ್ನು ತೋರಿಸುತ್ತದೆ.

ಪ್ರಕಟನೆಗಾರನಾದ ಯೋಹಾನನು ದರ್ಶನದಲ್ಲಿ ನೋಡುವ ಮುಂದಿನದು ಏಳು ತಲೆಗಳು ಮತ್ತು ಏಳು ಕೊಂಬುಗಳುಳ್ಳ ಕೆಂಪು ಘಟಸರ್ಪ (ಪ್ರಕ 12:3). ನಂತರ ಈ ಘಟಸರ್ಪವೇ ಸೈತಾನ ಎಂಬುದಾಗಿ ಗುರುತಿಸಲ್ಪಡುತ್ತದೆ (ಪ್ರಕ 12:9). ಅದರ 'ಬಾಲವು' ಜನರನ್ನು ಮೋಸಗೊಳಿಸುವ ಸಾಧನವನ್ನು ಸಂಕೇತಿಸುತ್ತದೆ (ಯೆಶಾ 9:14,15 ಮತ್ತು ಪ್ರಕ 9:10), ಮೂರನೇ ಒಂದು ಭಾಗದ ನಕ್ಷತ್ರಗಳನ್ನು ಪರಲೋಕದಿಂದ ಭೂಮಿಗೆ ಎಳೆದು ಹಾಕುತ್ತದೆ (ಪ್ರಕ 12:4).

ಈ ಕೃತ್ಯವು ಪರಲೋಕದ ಉನ್ನತ ಸ್ಥಾನದಿಂದ ಕೆಳಗೆ ಬೀಳಲ್ಪಟ್ಟದ್ದನ್ನು ತೋರಿಸುತ್ತದೆ (ಯೆಶಾಯ 14:12–15), ಸೈತಾನನು ಮೂರನೇ ಬಂದರ ಭಾಗದಷ್ಟು ದೇವದೂತರನ್ನು ಮೋಸಪಡಿಸಬಲ್ಲವನಾಗಿದ್ದಾನೆ. ಈ ದೊಬ್ಬಲ್ಪಟ್ಟ ದೇವದೂತನು ಸೈತಾನನಿಗೆ ದೇವರ ಮತ್ತು ಆತನ ಕಾರ್ಯಗಳ ವಿರುದ್ಧವಾಗಿ ವರ್ತಿಸಲು ಸಹಾಯ ಮಾಡುತ್ತವೆ (1 ತಿಮೊ 4:1) ಪ್ರಕಟನೆಯಲ್ಲಿ ಹೇಳುವ ಏಳು ತಲೆಗಳು ಮತ್ತು ಹತ್ತು ಕೊಂಬುಗಳು ಸೈತಾನನು ಈ ಲೋಕದಲ್ಲಿ ಉಪಯೋಗಿಸುವ ತನ್ನ ದೂತರನ್ನು ಅಂದರೆ ಪ್ಯಾಗನ್‌ರೋಮ್‌ನನ್ನು (ಪ್ರಕ 12:4) ಮತ್ತು ಬೇತಾಳಿಕತೆಯನ್ನು (ಪ್ರಕ 16:13) ಸಂಕೇತಿಸುತ್ತದೆ. ಸೈತಾನನೇ ಘಟಸರ್ಪವೆಂಬುದಾಗಿ ಕರೆಯಲ್ಪಟ್ಟಿದ್ದಾನೆ (ಪ್ರಕ 12:9). ಈ ಸೈತಾನನೇ ಯೇಸುವನ್ನು ಕೊಲ್ಲುವಂತೆ ಹೆರೋದನನ್ನು ಪ್ರಚೋದಿಸಿದನು. ಆದರೆ ಕ್ರಿಸ್ತಶಕದ

ಆರಂಭದಲ್ಲಿ ಹೆರೋದನನ್ನು ಪ್ರಚೋದಿಸಿದನು. ಆದರೆ ಕ್ರಿಸ್ತಶಕದ ಆರಂಭದಲ್ಲಿ ಕ್ರಿಸ್ತನನ್ನು ಮತ್ತು ಆತನ ಜನರನ್ನು ನಾಶಪಡಿಸಲು ರೋಮ್ ಸಾಮ್ರಾಜ್ಯವು ಸೈತಾನನಿಗೆ ಸಹಾಯ ಮಾಡಿತು. ಆವಾಗ ರೋಮ್ ಸಾಮ್ರಾಜ್ಯದಲ್ಲಿ ಪೇಗನ್ ಧರ್ಮವು ಆಚರಣೆಯಲ್ಲಿತ್ತು. ಘಟಸರ್ಪವು ಪ್ರಾಥಮಿಕವಾಗಿ ಸೈತಾನನ್ನು ಪ್ರತಿನಿಧಿಸಿದಾಗ್ಯೂ ದ್ವಿತೀಯವಾಗಿ ಅದು ಪೇಗನ್‌ರೋಮ್‌ನ್ನು ಪ್ರತಿನಿಧಿಸುತ್ತದೆ.

ಎಲೆನ್ ಜಿ ವೈಟ್ ಮಹಾಹೋರಾಟ ಪು. 438.

**ಓದಿರಿ : ಪ್ರಕ 12:9. ಇಲ್ಲಿ ಸೈತಾನನನ್ನು 'ಪುರಾತನ ಸರ್ಪ' ಎಂದು ಕರೆಯಲಾಗಿದೆ. ಹಾಗಾದರೆ ಆದಿಕಾಂಡ 3:15 ರ ಸ್ತ್ರೀಯ ಸಂತಾನಕ್ಕೂ ಆ ಸ್ತ್ರೀಯು ಹೆರುತ್ತಿರುವ ಮಗುವನ್ನು ನಾಶಮಾಡಲು ಘಟಸರ್ಪನು ಪ್ರಯತ್ನಿಸುವುದಕ್ಕೂ ಯಾವ ಸಂಬಂಧವಿದೆ ಆರಂಭದಿಂದಲೂ ಸೈತಾನನು ಹುಟ್ಟಲಿರುವ ಅಭಿಷಿಕ್ತನನ್ನು ನಾಶಪಡಿಸಲು ಕಾಯುತ್ತಿದ್ದನು. ಅಭಿಷಿಕ್ತನು ಹುಟ್ಟಿದಾಗ ಸೈತಾನನು ಪೇಗನ್ ಸಾಮ್ರಾಜ್ಯದಿಂದ (ಪ್ರಕ 12:4 ರಲ್ಲಿ ಘಟಸರ್ಪವೆಂತಲೇ ಸಾಂಕೇತಿಕವಾಗಿ ಕರೆಯಲ್ಪಟ್ಟಿದೆ). ಯೇಸುಕ್ರಿಸ್ತನನ್ನು ನಾಶಪಡಿಸಲು ಪ್ರಯತ್ನಿಸುತ್ತಾನೆ. ಮತ್ತಾಯ 2:13–16, ಆದರೆ ಮಗುವು (ಕ್ರಿಸ್ತನು) ಪರಲೋಕಕ್ಕೆ, ಸಿಂಹಾಸನದ ಬಳಿಗೆ ಎತ್ತಲ್ಪಟ್ಟಿತು (ಪ್ರಕ 12:5).**

**ಸೋಮವಾರ** **ಫೆಬ್ರವರಿ 18**

## ಸೈತಾನನು ಭೂಮಿಗೆ ದೊಬ್ಬಲ್ಪಟ್ಟನು

**ಓದಿರಿ : ಪ್ರಕಟನೆಗಳು 12:7–9, ಇದು ಪರಲೋಕದಲ್ಲಿ ನಡೆದ ಯುದ್ಧದ ಬಗ್ಗೆ ಹೇಳುತ್ತದೆ. ಸೈತಾನನನ್ನು ಪರಲೋಕದಿಂದ ಹೊರದೂಡುವಂತೆ ಮಾಡಿದ ಯುದ್ಧವು ಯಾವ ಬಗೆಯದು?**

ದೇವರ ಸರ್ಕಾರದ ವಿರೋಧವಾಗಿ ಬಂಡೆದ್ದಾಗ ಸೈತಾನನನ್ನು ಮಹಾ ಹೋರಾಟದ ಆರಂಭದಲ್ಲಿ ಪರಲೋಕದಿಂದ ಹೊರದೂಡಲ್ಪಟ್ಟನು. ಅವನು ಪರಲೋಕದಲ್ಲಿ ದೇವರ ಸಿಂಹಾಸನವನ್ನು ಕಿತ್ತುಕೊಂಡು ದೇವರಂತೆ ಆಗಬೇಕು ಎಂದು ಆಸೆಪಟ್ಟನು (ಯೆಶಾ 14:12–15). ದೇವರಿಗೆ ವಿರೋಧವಾಗಿ ಆತನು

ಮುಕ್ತವಾದ ಬಂಡಾಯವೆದ್ದನು. ಆವಾಗ ಅವನು ಸೋಲಿಸಲ್ಪಟ್ಟು ಭೂಮಿಗೆ ದೊಬ್ಬಲ್ಪಟ್ಟನು. ಆದಾಗ್ಯೂ ಸೈತಾನನು ಆದಾಮ ಮತ್ತು ಹವ್ವಳನ್ನು ವಂಚಿಸಿ ಭೂಮಿಯ ಮೇಲೆ ಮನುಷ್ಯನಿಗಿದ್ದ ಅಧಿಕಾರವನ್ನು ತಾನು ಕಿತ್ತುಕೊಂಡನು. ಲೂಕ 4:6.

ಸೈತಾನನು ತನ್ನನ್ನು ಭೂಲೋಕದ ಅಧಿಪತಿ ಎಂಬುದಾಗಿ ಘೋಷಿಸಿಕೊಂಡು (ಯೋಹಾನ 12:31). ತಾನು ಪರಲೋಕದಲ್ಲಿ ದೇವರ ಸನ್ನಿಧಿಗೆ ಭೂಲೋಕದ ಪ್ರತಿನಿಧಿಯಾಗಿ ಪ್ರವೇಶಿಸುವ ಹಕ್ಕನ್ನು ಸಾಧಿಸುತ್ತಾನೆ (ಯೋಬ 1:6–12). ಆದರೆ ಆತನು ಶಿಲುಬೆಯ ಮೇಲೆ ಕ್ರಿಸ್ತನಿಂದ ಸೋಲಿಸಲ್ಪಟ್ಟನು ಹಾಗಾಗಿ ಸೈತಾನನು ಆತನ ಅನುಚರರೂ ಭೂಮಂಡಲವನ್ನು ಬಿಟ್ಟು ಪರಲೋಕಕ್ಕೆ ಹೋಗಲಾರರು. ಅವರು ತಮ್ಮ ಶಿಕ್ಷೆಯನ್ನು ಹೊಂದುವವರೆಗೂ ಭೂಮಿಯು ಸೆರೆಮನೆಯಂತಿರುತ್ತದೆ (2 ಪೇತ್ರ 2:4, ಯೂದ 6).

ಕ್ರಿಸ್ತನು ತನ್ನ ಮರಣದ ಮೂಲಕ ಮನುಷ್ಯನು ಕಳೆದುಕೊಂಡಿದ್ದನ್ನು ಮತ್ತೆ ಪಡೆದುಕೊಂಡನು. ಇದರಿಂದ ಜಗತ್ತಿಗೆ ಸೈತಾನನ ನಿಜವಾದ ಗುಣಸ್ವಭಾವ ಬಯಲಾಯಿತು. ತಾನು ಹಾಕಿಕೊಂಡಿದ್ದ ವೇಷವು ಕಳಚಿ ಹೋದದ್ದು ಸೈತಾನನಿಗೆ ತಿಳಿಯಿತು. ಸೈತಾನನ ಆಡಳಿತವು ಬಿದ್ದುಹೋಗದ ಲೋಕಗಳಿಗೆ ಮುಕ್ತವಾಗಿ ಇಡಲ್ಪಟ್ಟಿತು. ಆತನು ತನ್ನನ್ನು ತಾನು ಕೊಲೆಗಾರನಾಗಿ ತೋರಿಸಿಕೊಂಡನು. ಸೈತಾನನು ಕ್ರಿಸ್ತನ ರಕ್ತವನ್ನು ಸುರಿಯುವಂತೆ ಮಾಡಿದುದರಿಂದ ತನ್ನನ್ನು ತಾನೆ ಪರಲೋಕ ವಾಸಿಗಳ ಸಹಾನುಭೂತಿ (ಅನುಕಂಪ)ಯನ್ನು ಕಳೆದುಕೊಂಡನು. ಅಂದಿನಿಂದ ಅವನ ಕೆಲಸಗಳಿಗೆ ನಿರ್ಬಂಧವಾಯಿತು.

ಎಲೆನ್ ಜಿ ವೈಟ್ Desire of Ages P. 761.

ಸಮಸ್ತ ಜಗತ್ತಿನ ಎದುರಿನಲ್ಲೇ ಭೂಮಿಯ ಆಳ್ವಿಕೆಯ ಸೈತಾನನ ಕೈಯಿಂದ ಕ್ರಿಸ್ತನಿಗೆ ವರ್ಗಾಯಿಸಲ್ಪಟ್ಟಿತು. ಕ್ರಿಸ್ತನೇ ಭೂಲೋಕದ ನಿಜವಾದ ಅಧಿಕಾರಿಯೆಂದು ಘೋಷಿಸಲ್ಪಟ್ಟನು (ಎಫೆಸ 1:20–22, ಫಿಲಿ 2:9–11).

ಕ್ರಿಸ್ತನು ಈ ಘಟನೆಯನ್ನು ಮುಂದಾಗಿಯೇ ತಿಳಿಸಿದ್ದಾನೆ. ಈವಾಗ ನ್ಯಾಯತೀರ್ಪು ಲೋಕದ ಮೇಲೆ ಬಂದಿದೆ. ನ್ಯಾಯತೀರ್ಪಿನ ಬಳಿಕ, ರಕ್ಷಣೆ,

ಬಲ ಮತ್ತು ದೇವರ ರಾಜ್ಯವು ಹಾಗೂ ದೇವರ ಅಭಿಷಿಕ್ತನಿಗೆ (ಯೇಸುಕ್ರಿಸ್ತ) ಜಯವು ಶಕ್ತಿಯು ರಾಜ್ಯವು ಉಂಟಾಗುತ್ತದೆ. ಪ್ರಕ 12:10.

ಈ ಲೋಕದ ಅಧಿಪತಿಯನ್ನು ಹೊರಗೆ ಹಾಕಲ್ಪಡುತ್ತಾನೆ (ಯೋಹಾನ 12:31). ಈ ಲೋಕದ ಜನರಿಗೆ ಉಪದ್ರವ ನೀಡುವ ಪರಿಮಿತ ಅಧಿಕಾರವು ಸೈತಾನನಿಗೆ ಇನ್ನೂ ಇರುತ್ತದೆ ತನಗಿರುವ ಸಮಯವು ಬಹಳ ಕಡಿಮೆ ಎಂಬ ಅರಿವು ಅವನಿಗಿದೆ (ಪ್ರಕ 12:12).

ಆತನಿಗೆ ಇರುವ ಸಮಯವು ನಿಜವಾಗಿ ಸ್ವಲ್ಪವೇ ಆಗಿದ್ದಾಗ್ಯೂ ಆತನು ಎಲ್ಲಾ ನೋವು ಕಷ್ಟ ಮತ್ತು ನಾಶನವನ್ನು ಉಂಟುಮಾಡುತ್ತಾನೆ. **ಸೈತಾನನ ವಿರುದ್ಧವಾಗಿ ಸಮರ್ಥಿಸಿಕೊಳ್ಳುವುದು ಹೇಗೆಂದು ಪ್ರಕ 12:11 ಬೋಧಿಸುತ್ತದೆ** (ಎಫೆ 6:10–18ನ್ನು ಸಹ ನೋಡಿರಿ).

**ಮಂಗಳವಾರ** **ಫೆಬ್ರವರಿ 19**

## ಭೂಮಿಯ ಮೇಲೆ ನಡೆಯುವ ಯುದ್ಧ

**ಓದಿರಿ : ಪ್ರಕಟನೆಗಳು 12:13,14.**

ಸೈತಾನನು ಪರಲೋಕದಿಂದ (ನಿಷೇಧಿಸಿರಲಾಗಿ) ಹೊರದೂಡಿರಲಾಗಿ ಆತನು ಪ್ರವಾದಿತ 1260 ವರ್ಷಗಳ ಅವಧಿಯಲ್ಲಿದ್ದರೂ ಸಭೆಯ ಮೇಲೆ ತನ್ನ ಆಕ್ರಮಣವನ್ನು ಮುಂದುವರೆಸುತ್ತಾನೆ. ಈ ಅವಧಿಯಲ್ಲಿ ದೇವರು ಹೇಗೆ ಸಭೆಯೊಂದಿಗೆ ತನ್ನನ್ನು ತೊಡಗಿಸಿಕೊಂಡಿದ್ದನು?

ಯೇಸುಕ್ರಿಸ್ತನು ತನ್ನ ಪ್ರಾಣರಕ್ಷಣೆಯ ಮಹಾಕೃತ್ಯದಿಂದ ಸಹೋದರರ ಮೇಲೆ ದೋಷಾರೋಪಣೆ ಮಾಡುತ್ತಿದ್ದ ಸೈತಾನನನ್ನು ಯೇಸುಕ್ರಿಸ್ತನು ತನ್ನ ಸ್ವಂತ ಪ್ರಾಣವನ್ನು ಅರ್ಪಿಸುವ ಮಹಾಕೃತ್ಯದ ಮೂಲಕ ಪರಲೋಕದಿಂದ ಹೊರದೂಡಿದನು.

ವಿಮೋಚನೆಯ ಯೋಜನೆ ಸೈತಾನನ ಕಡು ವಿರೋಧವಿದ್ದಾಗ್ಯೂ ಅದು ಮುಂದುವರೆಸಲ್ಪಟ್ಟಿರುತ್ತಾ ಬಂದಿದೆ. ತಾನು ಮನುಷ್ಯನಿಂದ ಕಸಿದುಕೊಂಡ ಈ ಭೂಮಿಯನ್ನು (ಸಾಮ್ರಾಜ್ಯವನ್ನು) ಮತ್ತೆ ತನ್ನ ಕೈಯಿಂದ ಕ್ರಿಸ್ತನು

ಕಸಿದುಕೊಳ್ಳುತ್ತಾನೆಂದು ತಿಳಿದವನಾಗಿ ದೇವರು ತನ್ನ ಸ್ವರೂಪದಲ್ಲಿ ಸೃಷ್ಟಿಸಿರುವ ಮನುಷ್ಯನಿಗೆ ಸಾಧ್ಯವಾದಷ್ಟು ಹೆಚ್ಚಾಗಿ ನಾಶಪಡಿಸಲು ಅವರಿಗೆ ಇನ್ನಿಲ್ಲದ ನೋವುಗಳನ್ನು ಕೊಡಲು ದೃಢನಿರ್ಧಾರ ಮಾಡಿಕೊಂಡಿದ್ದಾನೆ. ಯೇಸುಕ್ರಿಸ್ತನು ಮನುಷ್ಯನ ಮೇಲೆ ಕನಿಕರಪಟ್ಟು ಕ್ಷಮಿಸುವಂಥ ಪ್ರೀತಿಯನ್ನು ಅವನ ಮೇಲೆ ತೋರಿಸಿರುವುದರಿಂದ ಸೈತಾನನು ಮನುಷ್ಯನನ್ನು ದ್ವೇಷಮಾಡುತ್ತಾನೆ. ಹಾಗಾಗಿ ಸೈತಾನನು ತನ್ನ ಅಸಹಾಯಕ ಪರಿಸ್ಥಿತಿ ನಿಮಿತ್ತ ತನ್ನ ಶಕ್ತಿ ಮೀರಿ ಮನುಷ್ಯನು ನಾಶ ಹೊಂದುವ ಹಾಗೆ ಎಲ್ಲಾ ತರದ ವಂಚನೆಯನ್ನು ಅವನ ಮೇಲೆ ಪ್ರಯೋಗಿಸಲು ಸಿದ್ಧನಾಗಿದ್ದಾನೆ. ಎಲೆನ್ ಜಿ ವೈಟ್, 'ದಿ ಸ್ಪಿರಿಟ್ ಆಫ್ ಪ್ರಾಫೆಸಿ, ಸಂಪುಟ 3, ಪುಟ 194, 195.

ಕ್ರಿಸ್ತನ ಭೂಮಿಯಲ್ಲಿನ ಸಭೆಯ ಮೇಲೆ ಇಟ್ಟಿರುವ ಪ್ರೀತಿಯ ವಿರುದ್ಧ ಸೈತಾನನು ಭೂಮಿಯ ಮೇಲೆ ತನ್ನ ರೌದ್ರವನ್ನು ಸುರಿಸುವವನಾಗಿ ತನ್ನ ಚಟುವಟಿಕೆಯನ್ನು ಮುಂದುವರೆಸಿದ್ದಾನೆ. ಹೀಗಿದ್ದಾಗ್ಯೂ, ಸಭೆಯು ಪ್ರವಾದನೆಯಲ್ಲಿ ಹೇಳಿರುವಂತೆ 1260 ವರ್ಷಗಳು ನಿರ್ಜನವಾದ ಅರಣ್ಯದಲ್ಲಿ ದೈವಸಂರಕ್ಷಣೆಯನ್ನು ಹೊಂದುತ್ತದೆ.

ಸಭೆಯನ್ನು ಸೈತಾನನು ಹಿಂಸಿಸುವ 1260 ವರ್ಷಗಳ ವಿಷಯದಲ್ಲಿ ಪ್ರಕಟನೆ 12ರಲ್ಲಿ ಎರಡು ಬಾರಿ ಹೇಳಲ್ಪಟ್ಟಿದೆ. ಒಂದುಕಾಲ, ಎರಡು ಕಾಲ ಮತ್ತು ಅರ್ಧಕಾಲ (ಪ್ರಕ 12:14) ಈ ಎರಡೂ ಕಾಲಾವಧಿಗಳು ದಾನಿಯೇಲ 7:23–25 ರಲ್ಲಿ ಚಿಕ್ಕಕೊಂಬು ನಡೆಸುವ ಹಿಂಸೆಗೆ ಉಲ್ಲೇಖವಾಗಿದೆ.

ಪ್ರವಾದನೆಯ ವಾಕ್ಯಗಳಲ್ಲಿರುವ ದಿನಗಳು ವರ್ಷಗಳನ್ನು ಸೂಚಿಸುತ್ತದೆ.

ಇತಿಹಾಸದಲ್ಲಿ ಕ್ರಿಶ 538 ರಿಂದ 1798ರ ಅವಧಿಯು ಇದಕ್ಕೆ ಸರಿಯಾಗಿ ಹೊಂದುತ್ತದೆ. ಇದು ರೋಮನ್ ಕಥೋಲಿಕ ಸಭೆಯ ಧಾರ್ಮಿಕ ಮತ್ತು ರಾಜಕೀಯ ಅಧಿಕಾರದಿಂದ ಪಾಶ್ಚಾತ್ಯ ದೇಶಗಳ ಮೇಲೆ ತನ್ನ ದಬ್ಬಾಳಿಕೆ ಮಾಡಿದ ಕಾಲ. ಈ ದಬ್ಬಾಳಿಕೆಯನ್ನು ನೆಪೋಲಿಯನ್ ಸಾಮ್ರಾಟನ ಸೇನಾಧಿಪತಿ ಬರ್ತಿಯಾರನು 1798 ರಲ್ಲಿ ಆಗಿನ ಪೋಪ್‌ನನ್ನು ಕೊಂದು ತಾತ್ಕಾಲಿಕವಾಗಿ ಅವನ ಆಡಳಿತವನ್ನು ಕೊನೆಗೊಳಿಸಿದನು.

ಈ ಸೈತಾನನು ಸಭೆಯೆಂಬ ಸ್ತ್ರೀಯನ್ನು ನಾಶಗೊಳಿಸಲು ತನ್ನ ಬಾಯೊಳಗಿಂದ ಜಲಪ್ರವಾಹವನ್ನು ಕಾರುವನು. ನೀರು ಜನಸಮೂಹವನ್ನು ಸಂಕೇತಿಸುತ್ತದೆ (ಪ್ರಕ 127:15). ಈ ಕಾಲದಲ್ಲಿ ರೋಮ್ ಅಧಿಪತ್ಯವು ನಂಬಿಗಸ್ತರಾದ ದೇವಜನರಿಗೆ ವಿರುದ್ಧವಾಗಿ ತನ್ನ ಸೈನ್ಯವನ್ನು ಪ್ರಯೋಗಿಸಿತು. ಈ ಪ್ರವಾದನೆಯ ವರುಷಗಳು ಮುಗಿಯುತ್ತಿದ್ದ ಹಾಗೆ ಸ್ನೇಹಪೂರ್ವಕವಾದ ನೆಲವು ಆ ನೀರಿನ ಪ್ರವಾಹವನ್ನು ಕುಡಿದುಬಿಟ್ಟು ಸ್ತ್ರೀಗೆ ಸುರಕ್ಷಿತ ಆದರೆ ಕೊಟ್ಟು ಕಾಪಾಡಿತು.

ಈ ಸ್ನೇಹಮಯವಾದ ನೆಲವು ಜನರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿ ಸಭೆಯನ್ನು ಉಳಿವಿಗೆ ಅಮೇರಿಕಾ ದೇಶವು ಮಾಡಿದ ಏರ್ಪಾಟನ್ನು ಸೂಚಿಸುತ್ತದೆ.

**1260 ವರ್ಷಗಳ ದೀರ್ಘ ಕಾಲದವರೆಗೆ ನಡೆದ ಹಿಂಸೆಯ ಬಗ್ಗೆ ಆಲೋಚಿಸಿರಿ.**

ಈ ದೀರ್ಘಕಾಲವು ಪರಿಮಿತ ತಿಳುವಳಿಕೆಯುಳ್ಳ ನಮಗೆ ಕ್ರಿಸ್ತನ ಬರೋಣವು ಯಾಕೆ ಇಷ್ಟು ತಡವಾಗುತ್ತಿದೆ ಎಂಬುದರ ಬಗ್ಗೆ ಏನನ್ನು ಹೇಳುತ್ತದೆ? ಕನಿಷ್ಟ ಪಕ್ಷ ನಾವು ನೋಡುವ ದೃಷ್ಟಿಯಿಂದ ಹೇಳೋಣ.

**ಬುಧವಾರ** **ಫೆಬ್ರವರಿ 20**

## ಉಳಿದವರ ಮೇಲೆ ಸೈತಾನನು ಮಾಡುವ ಯುದ್ಧ

**ಓದಿರಿ : ಪ್ರಕಟನೆ 12:17, ಯಾರ ವಿರೋಧವಾಗಿ ಸೈತಾನನು ತನ್ನೆಲ್ಲ ಶಕ್ತಿಯನ್ನು ಪ್ರಯೋಗಿಸಿ ಯುದ್ಧ ನಡೆಸುತ್ತಾನೆ?**

ಬಹುಜನರು ಭ್ರಷ್ಟರಾಗಿದ್ದಾಗ್ಯೂ, ದೇವರಿಗೆ ನಂಬಿಗಸ್ತರಾಗಿ ಉಳಿದ ಕೆಲವರನ್ನು ಕುರಿತು ಶೇಷರು ಅಥವ ಉಳಿದವರು ಎಂಬ ಪದವು ನಮಗೆ ಹೇಳುತ್ತದೆ (1 ಅರಸು 19:18 ಮತ್ತು ಪ್ರಕಟನೆ 2:24). ಅಂತ್ಯಕಾಲದಲ್ಲಿ ಈ ಲೋಕದಲ್ಲಿ ಬಹುತೇಕ ಜನರು ಸೈತಾನನ ಪಕ್ಷ ಹಿಡಿದಿರುವಾಗ ದೇವರು ಮತ್ತೊಂದು ಗುಂಪನ್ನು 1798ರ ನಂತರ ಎಬ್ಬಿಸುತ್ತಾನೆ. ಅವರು ಸೈತಾನನ ಆಕ್ರೋಶದ ನಡುವೆಯೂ ಕ್ರಿಸ್ತನಿಗೆ ನಂಬಿಗಸ್ತರಾಗಿ ಉಳಿಯುತ್ತಾರೆ.

ಪ್ರಕಟನೆ 12:17 ರಲ್ಲಿ ಹೇಳಿರುವ 'ಉಳಿದವರ' ಎರಡು ಗುಣಲಕ್ಷಣಗಳೇನು?

ಆತನಾಗಲೀ ಆಕೆಯಾಗಲಿ ದೇವರಿಗೆ ಸೇರಿದ 'ಉಳಿದವರು' ಎಂಬುದರ ಬಗ್ಗೆ ಒಬ್ಬನು ಹೇಗೆ ಖಾತ್ರಿ ಹೊಂದುತ್ತಾನೆ?

ಅಂತ್ಯಕಾಲದ 'ಉಳಿದವರು' ದೇವರ ಆಜ್ಞೆಗಳನ್ನು ಕೈಗೊಂಡು ನಡೆಯುತ್ತಾರೆ. ಪ್ರಕಟನೆ 13 ದಶಾಜ್ಞೆಗಳ ಮೊದಲ ಶಾಸನ ಅಂತ್ಯಕಾಲದ ಹೋರಾಟಕ್ಕೆ ಪ್ರಮುಖ ಕಾರಣವಾಗಿರುತ್ತದೆ. ಆರಾಧನೆ ಎಂಬುದು ಮೊದಲ ನಾಲ್ಕು ಆಜ್ಞೆಗಳ ಪ್ರಮುಖ ಅಂಶವಾಗಿದೆ. ಅಂತಿಮ ಬಿಕ್ಕಟ್ಟಿನಲ್ಲಿ ಯಾರನ್ನು ಆರಾಧಿಸಬೇಕು ಎಂಬುದೇ ಮುಖ್ಯವಾದ ವಿವಾದವಾಗಿರುತ್ತದೆ.

ಲೋಕದ ಜನರು ಮೃಗದ ವಿಗ್ರಹವನ್ನು ಆರಾಧಿಸಲು ಆಯ್ಕೆ ಮಾಡಿಕೊಳ್ಳುವಾಗ 'ಉಳಿದವರು' ಸೃಷ್ಟಿಕರ್ತನಾದ ದೇವರನ್ನು ಆರಾಧಿಸುತ್ತಾರೆ (ಪ್ರಕ 14:7). ಸಬ್ಬತ್ತು–4ನೇ ಆಜ್ಞೆಯು ದೇವರು ನಮ್ಮ ಸೃಷ್ಟಿಕರ್ತನೆಂದು ನಿರ್ದಿಷ್ಟವಾಗಿ ಸೂಚಿಸುತ್ತದೆ. ಈ ಕಾರಣದಿಂದ ಇದು ಅಂತಿಮ ಬಿಕ್ಕಟ್ಟಿನಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಅಂತ್ಯಕಾಲದ 'ಉಳಿದವರು' ಹೊಂದಿರುವ ಗುಣಲಕ್ಷಣವೇನೆಂದರೆ ಅವರು ಯೇಸುಕ್ರಿಸ್ತನ ಸಾಕ್ಷಿಯನ್ನು ಪಡೆದಿರುತ್ತಾರೆ. ಪ್ರಕಟನೆ 19:10 ಇದನ್ನು 'ಪ್ರವಾದನಾತ್ಮ'ವೆಂದು ವಿವರಿಸುತ್ತದೆ. ಈ ವಚನವು ಪ್ರಕಟನೆ 22:9 ರೊಂದಿಗೆ ಹೋಲಿಸುವಾಗ ಇಲ್ಲಿ ಯೋಹಾನನ ಜೊತೆ ಸಹೋದರರು ಯೇಸುಕ್ರಿಸ್ತನ ಸಾಕ್ಷಿಯನ್ನು ಹೊಂದಿರುವ ಪ್ರವಾದಿಗಳಾಗಿದ್ದಾರೆ.

(ಪ್ರಕಟನೆ 1:2) ರಲ್ಲಿ ಯೋಹಾನನು ಮಾಡಿದ ಹಾಗೆ ಯೇಸುಕ್ರಿಸ್ತನ ಸಾಕ್ಷಿ ಎಂಬುದು ಪ್ರವಾದಿಗಳ ಮೂಲಕ ಆತನ ಸತ್ಯಕ್ಕೆ ಸಾಕ್ಷಿ ಹೇಳುವಂಥದ್ದಾಗಿದೆ.

ಅಂತ್ಯಕಾಲದಲ್ಲಿ ಸೈತಾನನು ಜನರನ್ನು ವಂಚಿಸಿ ನಾಶಪಡಿಸುವುದರಿಂದ ಪ್ರತಿ ಪ್ರಯತ್ನವನ್ನು ಮಾಡುವವನಾಗಿರುವುದರಿಂದ ಅವರನ್ನು ಕಷ್ಟಕಾಲದಲ್ಲಿ ಮುನ್ನಡೆಸಲು ಅವರ ಮಧ್ಯದಲ್ಲಿ 'ಪ್ರವಾದನಾತ್ಮವು' ಇರುತ್ತದೆ.

ಅಡ್ವೆಂಟಿಸ್ಟರಾದ ನಮಗೆ ಎಲೆನ್ ಜಿ ವೈಟಮ್ಮನವರ ಸೇವೆ ಮತ್ತು ಬರಹಗಳಲ್ಲಿ ಈ ಪ್ರವಾದನಾತ್ಮದ ವರವು ಕೊಡಲ್ಪಟ್ಟಿದೆ.

**ನಮಗೆ ಪ್ರವಾದನಾತ್ಮದ ಮೂಲಕ ಕೆಲವು ನಂಬಲಸಾಧ್ಯವಾದ ಪರಿಜ್ಞಾನಗಳು ಕೊಡಲ್ಪಟ್ಟಿವೆ. ಇವುಗಳಲ್ಲಿ ಏನನ್ನು ಕಾಣುವಿರಿ? ಈ ವರವನ್ನು (ಪ್ರವಾದನ ಆತ್ಮದ) ವರವು ವ್ಯಕ್ತಿ ಅಥವಾ ಸಭೆಗೆ ಎಂತಹ ಕರ್ತವ್ಯದ ಜವಾಬ್ದಾರಿಯನ್ನು ಹೊರಿಸುತ್ತದೆ?**

**ಗುರುವಾರ** **ಫೆಬ್ರವರಿ 21**

## ಸೈತಾನನ ಅಂತ್ಯಕಾಲದ ತಂತ್ರಗಾರಿಕೆ

ಸೈತಾನನು ಈ ಲೋಕದ ಜನರನ್ನು ಗೆಲ್ಲಲು ಸಾಧ್ಯವಾದರೆ ದೇವರಾದು ಕೊಂಡವರನ್ನೂ ಸಹಾ ಮೋಸಪಡಿಸಲು ಬಯಸುವವನಾಗಿ ತನ್ನ ತಂತ್ರಗಾರಿಕೆಯನ್ನು ಬದಲಾಯಿಸಿಕೊಳ್ಳುತ್ತಾನೆ ಎಂಬುದನ್ನು ಪ್ರಕಟನೆ 12:17 ಗುರುತಿಸುತ್ತದೆ.

ಸೈತಾನನು ಕ್ರೈಸ್ತ ಇತಿಹಾಸದುದ್ದಕ್ಕೂ ದೇವರ ರಕ್ಷಣಾಕಾರ್ಯವನ್ನು ವಿರೋಧಿಸುತ್ತಾ ಬರೆದಿದ್ದಾನೆ.

ಸೈತಾನನು–ಪ್ರಾಥಮಿಕವಾಗಿ ಸಭೆಯೊಳಗೆ ಯುಕ್ತಿಸಂಧಾನದ ಮೂಲಕ, ಹೊರಗಿನಿಂದ ಹಿಂಸೆ ದಬ್ಬಾಳಿಕೆಗಳಿಂದ ಅಂತು ದೇವರ ರಕ್ಷಣಾಕಾರ್ಯವನ್ನು ಇತಿಹಾಸದುದ್ದಕ್ಕೂ ವಿರೋಧಿಸುತ್ತಾ ಬಂದಿದ್ದಾನೆ.

ಇದು ಅನೇಕ ಶತಮಾನಗಳು ಹೀಗೆ ಯಶಸ್ಸಿನಿಂದ ನಡೆದುದ್ದನ್ನು ದೇವಜನರು ಇದಕ್ಕೆ ವ್ಯತಿರಿಕ್ತವಾಗಿ ಸತ್ಯವೇದ ಅಧ್ಯಯನವನ್ನು ಮಾಡಿ ಸತ್ಯಕಂಡುಕೊಂಡರು ಮತ್ತು ಸುಧಾರಣೆಗಳಾದವು. ಆದರೆ ಸೈತಾನನು ತನಗಿರುವ ಸಮಯವು ಮುಗಿಯುತ್ತಾ ಬರುತ್ತಿದೆ ಎಂದು ತಿಳಿದುಕೊಂಡವನಾಗಿ ಅಂತ್ಯಕಾಲದ ತನ್ನ ಪರಿಶ್ರಮವನ್ನು ತೀವ್ರಗೊಳಿಸಿ, ಉಳಿದವರ ಮೇಲೆ ಯುದ್ಧ ಮಾಡುತ್ತಾನೆ (ಪ್ರಕ 12:17). ಆತನ ಆಕ್ರಮಣವು ದೊಡ್ಡ ವಂಚನೆಯ ಪಾತಗಳನ್ನು ಒಳಗೊಂಡಿದೆ. ದೆವ್ವಗಳು ಅದ್ಭುತಕಾಯಗಳನ್ನು ಮಾಡುತ್ತವೆ, ಬೇತಾಳಿತ್ವದ

(ಸತ್ತವರು ಬದುಕಿರುವವರು ಮೈಮೇಲೆ ಬರುತ್ತಾರೆ ಎಂಬ ನಂಬಿಕೆ) ಪ್ರದರ್ಶನಗಳನ್ನು ಪರಿಚಯಿಸುತ್ತಾನೆ (ಪ್ರಕ 16:14). ಈ ಸೈತಾನನ ತಂತ್ರಗಾರಿಕೆಯ ಬದಲಾವಣೆಯು ಚಾರಿತ್ರಿಕದಿಂದ ಅಂತ್ಯಕಾಲದ ದೃಷ್ಟಿಗೆ ಅನುಗುಣವಾಗಿ ಪರಿವರ್ತನೆಯಾಗುತ್ತದೆ (ಮತ್ತಾಯ 24:24).

ಪ್ರಕಟನೆ 12ನೇ ಅಧ್ಯಾಯದಿಂದ 20ನೇ ಅಧ್ಯಾಯದವರೆಗೆ 'ವಂಚನೆ' ಎಂಬ ವಿಶೇಷವಾದ ಪದವು ನಿಯಮಿತವಾಗಿ ಉಪಯೋಗಿಸಲ್ಪಟ್ಟಿದೆ. ಇದು ಸೈತಾನನ ಅಂತ್ಯಕಾಲದ ಚಟುವಟಿಕೆಗಳನ್ನು ಕುರಿತು ಹೇಳುತ್ತದೆ. 'ವಂಚನೆ' ಎಂಬ ಪದವು ಪ್ರಕಟನೆ 12:9 ರಲ್ಲಿ ಶುರುವಾಗಿ ಪ್ರಕಟನೆ 20:7–10 ರಲ್ಲಿ ಆತನ ಅಂತ್ಯಕಾಲದ ಚಟುವಟಿಕೆಗಳಲ್ಲಿ ಮುಕ್ತಾಯವಾಗುತ್ತದೆ.

ಓದಿರಿ : 2 ಥೆಸಲೋ 2:8–12ನ್ನು, ಪ್ರಕ 13:13,14 ಮತ್ತು ಪ್ರಕ 14:20 ರೊಟ್ಟಿಗೆ ಓದಿರಿ.

ಸೈತಾನನ ಅಂತ್ಯಕಾಲದ ವಂಚನೆಯು ಯಾವ ವಿಧವಾಗಿದೆ?

ಪ್ರಕಟನೆ 12ರಿಂದ 20ನೇ ಅಧ್ಯಾಯಗಳು ಸೈತಾನನು ಲೋಕವನ್ನು ವಂಚಿಸುವ ಪ್ರಯತ್ನಗಳನ್ನು ಚಿತ್ರಿಸುತ್ತದೆ. ಪ್ರಕ 12:9, 13:14, 18:23, 19:20, 20:8). ಆತನು ಒಂದರದ ಅಧಿಕಾರವನ್ನು ಸಮುದ್ರದಿಂದ ಬಂದ ಮೃಗವು ಸಂಕೇತಿಸುತ್ತದೆ. ಪುಸ್ತಕದ ಉಳಿದ ಎಲ್ಲಾ ಅಧ್ಯಾಯಗಳುದ್ದಕ್ಕೂ ಸೈತಾನಿಕ ತಂಡದ ಮೂವರು ಸದಸ್ಯರ ಬಗ್ಗೆ ಹೇಳಿದ, ಮೊದಲನೆಯದಾಗಿ ಘಟಸರ್ಪವು ಸಂಕೇತಿಸುವ ಅನ್ಯಧಾರ್ಮಿಕ ರೋಮು ಮತ್ತು ಬೇತಾಳಿಕೆ, ಎರಡನೆಯದು ಸಮುದ್ರದ ಮೃಗವು ಸಂಕೇತಿಸುವ ಕಥೋಲಿಕತ್ವವು, ಮೂರನೆಯದಾಗಿ ಭೂಮಿಯ ಮೃಗವು ಸಂಕೇತಿಸುವ ಭ್ರಷ್ಟ ಪ್ರೊಟೆಸ್ಟೆಂಟ್ ತತ್ವ. ಈ ಮೂವರೂ ಬೇರ್ಪಡದೆ ಮೂವರು ಲೋಕದಲ್ಲಿ ದೇವರ ಚಟುವಟಿಕೆಗಳನ್ನು ಒಟ್ಟಾಗಿ ವಿರೋಧಿಸುತ್ತಾರೆ.

ಸರ್ವಶಕ್ತನಾದ ದೇವರು ನಡೆಸುವ ಮಹಾಯುದ್ಧದ ದಿನದಲ್ಲಿ ಜನರು ದೇವರಿಂದ ದೂರವಾಗಿ ತನ್ನ ಪಕ್ಷವಹಿಸುವಂತೆ ಈ ಮೂರು ದುಷ್ಟಶಕ್ತಿಗಳು ಒಟ್ಟಾಗಿ ಕಾರ್ಯವೆಸಗುತ್ತದೆ (ಪ್ರಕ 16:13,14). ಈ ಸುಳ್ಳು ಧಾರ್ಮಿಕ ವ್ಯವಸ್ಥೆಯು ಕ್ರಿಸ್ತನ ಎರಡನೆ ಪ್ರತ್ಯಕ್ಷತೆಯಲ್ಲಿ ನಾಶವಾಗುತ್ತದೆ (ಪ್ರಕ 19:20). ಘಟಸರ್ಪವು

ಸಾಂಕೇತಿಸುವ ಪಿಶಾಚನು ಇಹಲೋಕದ ಅಧಿಕಾರದಿಂದ (ಪ್ರಕ 19:20) ಕಾರ್ಯವೆಸಗುವ ಅಂದರೆ ಘಟಸರ್ಪವು ಸಂಕೇತಿಸುವ ಪಿಶಾಚನು ಒಂದು ಸಾವಿರ ವರುಷಗಳ ಬಳಿಕ ನಾಶವಾಗುತ್ತಾನೆ (ಪ್ರಕ 20:10). ಅಂತ್ಯಕಾಲದ 'ವಂಚನೆಯು' ಅನೇಕ ಜನರು ನಾಶನದ ಮಾರ್ಗವನ್ನು ಆರಿಸಿಕೊಳ್ಳುವ ಹಾಗೆ ಮಾಡುವಷ್ಟು ದೊಡ್ಡದಾಗಿರುತ್ತದೆ (ಮತ್ತಾಯ 7:13).

**ಸೈತಾನನ ಅಂತ್ಯಕಾಲದ ವಂಚನೆಯ ಚಟುವಟಿಕೆಗಳನ್ನು ಕುರಿತು ಪ್ರಕಟನೆಯಲ್ಲಿ ಎರಡು ಸಲ ಬುದ್ಧಿ ಮತ್ತು ಆತ್ಮೀಕ ಜ್ಞಾನದ ಸೂಕ್ಷ್ಮತೆಯನ್ನು ಗ್ರಹಿಸುವುದಕ್ಕೆ ಕರೆ ಕೊಟ್ಟಿದೆ (ಪ್ರಕ 13:18, ಪ್ರಕ 17:9). ಯಾವತೆರನಾದ ಬುದ್ಧಿವಾದವು ಕೊಡಲ್ಪಟ್ಟಿದೆ? ಯೋಬ 1:5 ರಲ್ಲಿರುವಂತೆ ನಾವು ಹೇಗೆ ಈ ಜ್ಞಾನದಲ್ಲಿ ಹೊಂದಿಕೊಳ್ಳಬಹುದು?**

**ಶುಕ್ರವಾರ** **ಫೆಬ್ರವರಿ 22**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟಮ್ಮನವರ 'ಮಹಾಹೋರಾಟ' ಪುಸ್ತಕದ 'ಸೈತಾನನ ವಂಚನೆಗಳು' ಎಂಬ ಅಧ್ಯಾಯವನ್ನು ಓದಿರಿ, ಪುಟ 518–530.

ಪ್ರಕಟನೆ 12ನೇ ಅಧ್ಯಾಯದ ಮುಖ್ಯ ಉದ್ದೇಶವು ಕ್ರಿಸ್ತನಿಗೂ ಸೈತಾನನಿಗೂ ಇರುವ ಮಹಾಹೋರಾಟದ ಅಂತ್ಯಕಾಲದ ಘಟನೆಗಳನ್ನು ದೇವಜನರಿಗೆ ಹೇಳುವುದೇ ಆಗಿದೆ.

ನಾವು ಈ ದಿನ ಎಂತಹ ಸನ್ನಿವೇಶವನ್ನು ಎದುರಿಸುತ್ತಿದ್ದೇವೆ ಮತ್ತು ಭವಿಷ್ಯದಲ್ಲಿ ಇದು ಇನ್ನೂ ಎಷ್ಟು ಗಂಭೀರ ಸ್ಥಿತಿಗೆ ಮುಟ್ಟುತ್ತದೆ ಎಂಬುದರ ಬಗ್ಗೆಯು ದೇವಜನರಿಗೆ ಈ ಪುಸ್ತಕವು ಎಚ್ಚರಿಕೆ ಕೊಡುತ್ತದೆ.

2 ಥೆಸಲೋನಿಕ 2:9,10 ರಲ್ಲಿ ಪೌಲನು ಸೈತಾನನು ತನ್ನ ಪೂರ್ಣಶಕ್ತಿಯಿಂದಲೂ, ಸೂಚನೆಗಳಿಂದಲೂ, ಹಸಿ ಅದ್ಭುತಗಳಿಂದಲೂ, ಪೂರ್ಣ ಅನೀತಿಯುಳ್ಳ ವಂಚನೆಗಳಿಂದ ಕೂಡಿದ ಅಂತ್ಯಕಾಲದ ಚಟುವಟಿಕೆಗಳ ಬಗ್ಗೆ ಎಚ್ಚರಿಕೆ ನೀಡುತ್ತಾನೆ. ಇವುಗಳನ್ನೆಲ್ಲಾ ಯಾರು ಸತ್ಯದ ಪ್ರೀತಿಯನ್ನು ಅಂಗೀಕರಿಸದೆ ನಾಶದಲ್ಲಿರುತ್ತಾರೋ ಅವರ ಮಧ್ಯದಲ್ಲಿ ನಡೆಸುತ್ತಾನೆ. ಪ್ರಕಟನೆಯ ಒಂದು ಕಡೆ ನಾವು ದೇವರ ಮೇಲೆ ಆತುಕೊಂಡು ಅವನಿಗೆ ಹೆಚ್ಚಿನ ಆದ್ಯತೆ

ನೀಡುವಂತೆಯು ಭವಿಷ್ಯಕಾಲವನ್ನು ಗಂಭೀರವಾಗಿ ಪರಿಗಣಿಸುವಂತೆಯೂ ಎಚ್ಚರಿಕೆ ನೀಡುತ್ತದೆ. ಮತ್ತೊಂದು ಕಡೆ ಸೈತಾನನು ಅನುಭವವುಳ್ಳ ಬದ್ಧ ವೈರಿಯಾಗಿದ್ದಾಗ್ಯೂ ಆತನು ಕ್ರಿಸ್ತನನ್ನೂ ಸೋಲಿಸುವಷ್ಟು ಪ್ರಬಲನಲ್ಲವೆಂದು ನಮಗೆ ಖಾತ್ರಿಯನ್ನು ಕೊಡುತ್ತದೆ (ಪ್ರಕ 12:8).

ಹಿಂದಿನ ಕಾಲದಲ್ಲಿಯೇ ಸೈತಾನನನ್ನು ಮತ್ತು ಆತನ ದೂತರನ್ನೂ ಸೋಲಿಸಿರುವ ಯೇಸುಕ್ರಿಸ್ತನಲ್ಲಿ ಮಾತ್ರ ದೇವಜನರಿಗೆ ನಿರೀಕ್ಷೆ ಸಿಗುತ್ತದೆ. ಆತನು ಯುಗದ ಸಮಾಪ್ತಿಯವರೆಗೂ ತನ್ನ ನಂಬಿಗಸ್ತ ಜನರೊಂದಿಗಿರುವುದಾಗಿ ವಾಗ್ದಾನ ಮಾಡಿದ್ದಾನೆ (ಮತ್ತಾಯ 28:20).

## ಚರ್ಚಿಸಬೇಕಾದ ಪ್ರಶ್ನೆಗಳು

1. ಸವೆಂತ್ ಡೇ ಅಡ್ವೆಂಟಿಸ್ಟರಾಗಿ ಉಳಿದ ಸಭೆಯ ಗುಣಲಕ್ಷಣಗಳನ್ನು ಹೊಂದಿರುವುದು ಎಂತಹ ಸೌಭಾಗ್ಯ! ಮತ್ತು ಎಂತಹ ಜವಾಬ್ದಾರಿಯಲ್ಲವೆ! (ಲೂಕ 12:48) ಆದಾಗ್ಯೂ ಇದು ನಮ್ಮ ವೈಯಕ್ತಿಕ ರಕ್ಷಣೆಯನ್ನು ಖಾತ್ರಿಪಡಿಸುವುದಿಲ್ಲ. ಆದುದರಿಂದ ನಾವು ಯಾಕೆ ಎಚ್ಚರಿಕೆ ವಹಿಸಬೇಕು?

2. ನಾವು ಸೈತಾನನು ಹೊಂದಿರುವ ಬಲದ ಬಗ್ಗೆ ಬಹಳ ಮಾತಾಡಬಹುದು. ಸೈತಾನನು ಒಬ್ಬ ಶಕ್ತಿವಂತನೆಂಬುದು ನಿಜ ಆದರೆ ಅಂಥವನನ್ನು ಪರಲೋಕದಿಂದ ಹೊರದಬ್ಬಿರುವ ಬಲಾಢ್ಯನಾದ ರಕ್ಷಕನು ಇರುವುದಕ್ಕಾಗಿ ದೇವರಿಗೆ ವಂದಿಸೋಣ.